2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ  ನಂಃ 02/2012</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಘವೇಂದ್ರ | ಪಿಡಬ್ಲೂ -42 |
| ತಂದೆಯ ಹೆಸರು | - | ಮಂಜುನಾಥ ಶೆಟ್ಟಿ | ಸಿಡಬ್ಲೂ  -23 |
| ವಯಸ್ಸು | - | 51 ವರ್ಷ | |
| ಉದ್ಯೋಗ | - | ಚಿನ್ನ ಬೆಳ್ಳಿ ಅಂಗಡಿಯಲ್ಲಿ ಕೆಲಸ | |
| ವಾಸ ಸ್ಥಳ | - | ಶಿವಮೊಗ್ಗ | |

ದಿನಾಂಕಃ 17.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ 2 ನೇ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ  ಮತ್ತು 1 ನೇ ಆರೋಪಿ ಸುರೇಶ ಸಹ ನನಗೆ ಗೊತ್ತಿಲ್ಲ. ಚಾಸಾ.22 ಭೋಜರಾಜ್ ರವರು ಗೊತ್ತು. ಪ್ರಾಸಾ.17 ರವರು ಗೊತ್ತು.

2. ಈಗ್ಗೆ 15 ವರ್ಷಗಳ ಹಿಂದೆ ನಾನು ಚಾಸಾ.22 ರವರಿಂದ 4447 ನೋಂದಣಿ ಸಂಖ್ಯೆಯುಳ್ಳ ಒಂದು ಸೆಕೆಂಡ್ ಹ್ಯಾಂಡ್ ಲೂನಾವನ್ನು ಸುಮಾರು 2,000/- ಗೆ ಖರೀದಿಸಿದ್ದೆನು.  ಆ ಸಮಯದಲ್ಲಿ ಚಾಸಾ.22 ರವರು ಫಾರಂ ನಂಬರ್ 29 ಮತ್ತು 30 ಕ್ಕೆ ಸಹಿ ಮಾಡಿಕೊಟ್ಟಿದ್ದರು. ಆದರೆ ಅವರು ಸದರಿ ವಾಹನದ ಮಾಲೀಕತ್ವಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ಕೊಟ್ಟಿರಲಿಲ್ಲ.  ಸದರಿ ಫಾರಂಗಳಲ್ಲಿ ವಾಹನದ ಮಾಲೀಕರು ಯಾರೆಂದು ನಮೂದಿಸಲಾಗಿತ್ತು ಎಂದು ನಾನು ಗಮನಿಸಿಲ್ಲ ಕಾರಣ ನಾನು ಸದರಿ ವಾಹನದ ನೋಂದಣಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರಲಿಲ್ಲ.

3. ನಾನು ಚಾಸಾ.22 ರವರಿಂದ ಸದರಿ ಲೂನಾವನ್ನು ಖರೀದಿಸಿದ 1 ವರ್ಷದ ಒಳಗೆ ನಾನು ಅದನ್ನು ಫ್ರಾಸಾ.17 ರಾಮುರವರಿಗೆ ರೂ.1,500/- ಗೆ ಮಾರಾಟ ಮಾಡಿದ್ದೇನೆ. ಆ ಸಮಯದಲ್ಲಿ ನಾನು ಮೇಲೆ ಹೇಳಿದಂತೆ ಚಾಸಾ.22 ರವರು ನನಗೆ ಕೊಟ್ಟಿದ್ದ ಫಾರಂ ನಂಬರ್ 29 ಮತ್ತು 30 ರನ್ನು ಫ್ರಾಸಾ.17 ರವರಿಗೆ ಕೊಟ್ಟಿದ್ದೇನೆ. ನಾನು ಚಾಸಾ.22 ರವರಿಂದ ಸದರಿ ಲೂನಾವನ್ನು ಖರೀದಿಸುವಾಗ ಮತ್ತು ನಾನು ಅದನ್ನು ಫ್ರಾಸಾ.17 ರವರಿಗೆ ಮಾರುವಾಗ ಯಾವುದೇ ಬರವಣಿಗೆಯನ್ನು ಮಾಡಿಕೊಂಡಿರಲಿಲ್ಲ.

4. ಈಗ್ಗೆ 8-10 ವರ್ಷಗಳ ಹಿಂದೆ ಸಾಗರ ಪೊಲೀಸರು ಸದರಿ ಲೂನಾದ ಬಗ್ಗೆ ವಿಚಾರಿಸಲು ಶಿವಮೊಗ್ಗದಲ್ಲಿ ನಾನು ಕೆಲಸ ಮಾಡುವ ಚಿನ್ನ ಬೆಳ್ಳಿ ಅಂಗಡಿಯ ಹತ್ತಿರ ಬಂದಿದ್ದರು. ಸದರಿ ಲೂನಾ ಎಲ್ಲಿದೆ ಎಂದು ಕೇಳಿದರು. ಆಗ ನಾನು ಅದನ್ನು ಚಾಸಾ.22 ರವರಿಂದ ಖರೀದಿಸಿದ್ದಾಗಿ ಮತ್ತು ಫ್ರಾಸಾ.17 ರವರಿಗೆ ಮಾರಾಟ ಮಾಡಿದ್ದಾಗಿ ತಿಳಿಸಿದ್ದೇನೆ. ನಂತರ ನಾನು ಪೊಲೀಸರನ್ನು ಕರೆದುಕೊಂಡು ಹೋಗಿ ಅವರಿಗೆ ಫ್ರಾಸಾ.17 ರವರನ್ನು ತೋರಿಸಿದ್ದೇನೆ. ಮೇಲೆ ಹೇಳಿದಂತೆ ಚಾಸಾ.22 ರವರಿಂದ ಖರೀದಿಸಿ ಫ್ರಾಸಾ.17 ರವರಿಗೆ ಮಾರಾಟ ಮಾಡಿದ್ದ ಲೂನಾವನ್ನು ನೋಡಿದರೆ ಗುರುತಿಸುತ್ತೇನೆ.

5. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದ ಲೂನಾ ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿರುತ್ತದೆ.

6. ಸಾಗರ ಪೊಲೀಸರು ಆ ಬಗ್ಗೆ ನನ್ನನ್ನು ವಿಚಾರಿಸಿದ್ದರು ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಅವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಶ್ರೀ ಹೆಚ್ ಇ ಎ ಕೆ ವಕೀಲರಿಂದಃ **1** ನೇ ಆರೋಪಿ ಪರವಾಗಿಃ

7. ಒಬ್ಬ ಮಹಿಳೆ ನೀವು ಹೇಳಿದ ಲೂನಾವನ್ನು ಚಲಾಯಿಸಿಕೊಂಡು ಹೋಗಿ ನೀರಿಗೆ ಬಿದ್ದು ಮೃತಪಟ್ಟಿದ್ದ ಬಗ್ಗೆ ನಿಮ್ಮನ್ನು ಪೊಲೀಸರು ವಿಚಾರಿಸಲು ಬಂದಿದ್ದರು ಎಂದರೆ ಸಾಕ್ಷಿ ಆ ವಿಚಾರವನ್ನು ನನಗೆ ಹೇಳಿಲ್ಲ ಆದರೆ ಲೂನಾದ ಬಗ್ಗೆ ವಿಚಾರ ಮಾಡಲು ಬಂದಿದ್ದರು ಎನ್ನುತ್ತಾರೆ. ಆ ವೇಳೆಗೆ ಸದರಿ ಲೂನಾ ಪ್ರಾಸಾ.17 ರವರ ಬಳಿ ಇತ್ತು ಎಂದರೆ ಸರಿ. ನಂತರ ನೀವು ಪ್ರಾಸಾ.17 ರವರನ್ನು ಸದರಿ ಲೂನಾದ ಬಗ್ಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ